KATK010032612022

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ.75/2022**

ಪ್ರಾ.ಸಾ. ಃ **9**

ದೋ.ಸಾ. ಃ **9**

ದಿ.**21.04.2026**

| | |
|---|---|
| ಹೆಸರು | ಃ ಸಿದ್ದಪ್ಪ ಆರ್.ಎಸ್. |
| ತಂದೆಯ ಹೆಸರು | ಃ ಸಿದ್ದನಂಜಪ್ಪ |
| ವಯಸ್ಸು | ಃ **55** ವರ್ಷ |
| ಉದ್ಯೋಗ | ಃ ಪಿಎಸ್ಐ, ಡಾಬಸ್ ಪೇಟೆ ಪೋಲೀಸ್ ಠಾಣೆ |
| ವಾಸಸ್ಥಳ | ಃ ತುಮಕೂರು |

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. 2018 ರಿಂದ 2022 ರವರೆಗೆ ನಾನು ಕ್ಯಾತ್ಸಂದ್ರ ಪೋಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿ.25.06.2019 ರಂದು ಸಂಜೆ 7.15 ಗಂಟೆಗೆ ಠಾಣಾ ಸರಹದ್ದಿನ ಕೆ.ಪಾಲಸಂದ್ರ ವಾಸಿ ಪಿ.ಬಿ.ವಸಂತರಾಮ ಬಿನ್ ಪಿ.ಎನ್. ಬಸವರಾಜುರವರು ನೀಡಿದ ದೂರನ್ನು ಸ್ವೀಕರಿಸಿ, ನಮ್ಮ ಠಾಣಾ ಮೊ.ನಂ.111/2019 ರಲ್ಲಿ ಪ್ರಕರಣವನ್ನು ನೋಂದಾಯಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೂ, ಅದರ ಪ್ರತಿಯನ್ನು ನನ್ನ ಮೇಲಧಿಕಾರಿಗಳಿಗೆ ರವಾನಿಸಿದೆನು. ನಿಶಾನೆ ಪಿ2 ದೂರಿನಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ2(ಬಿ) ಎಂದು ಗುರುತಿಸಲಾಯಿತು. ಪ್ರ ವ ವರದಿಯನ್ನು ನಿಶಾನೆ ಪಿ10 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ10 (ಎ) ಎಂದು ಗುರುತಿಸಲಾಯಿತು.
3. ಆ ದಿನ ಕೃತ್ಯ ನಡೆದ ಸ್ಥಳಕ್ಕೆ ಹೋಗಲು ಅವೇಳೆಯಾಗಿದ್ದರಿಂದ ದಿ.26.06.2019 ರಂದು ಕೃತ್ಯ ನಡೆದ ಸ್ಥಳಕ್ಕೆ ಹೋಗಿ, ಪಂಚರ ಸಮಕ್ಷಮ ಪಂಚನಾಮೆ ಕ್ರಮ

ಜರುಗಿಸಿರುತ್ತೇನೆ. ನಿಶಾನೆ ಪಿ3 ಪಂಚನಾಮೆಯಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ3(ಡಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ವಸ್ತುಗಳು ದೊರೆತಿಲ್ಲವಾದ್ದರಿಂದ ಫಿರ್ಯಾದಿಯನ್ನು ವಿಚಾರಿಸಲಾಗಿ ಕೃತ್ಯಕ್ಕೆ ಉಪಯೋಗಿಸಿದ ವಸ್ತುಗಳನ್ನು ತನ್ನ ಮನೆಯಲ್ಲಿಟ್ಟುಕೊಂಡಿದ್ದು ಠಾಣೆಗೆ ತಂದು ಹಾಜರುಪಡಿಸುತ್ತೇನೆಂದು ತಿಳಿಸಿರುತ್ತಾರೆ.

4. ನಂತರ ಈ ಕೇಸಿನ ಫಿರ್ಯಾದಿಯ ತಂದೆ ಬಸವರಾಜು, ತಾಯಿ ಭಾಗ್ಯಮ್ಮ ಮತ್ತು ಪ್ರತ್ಯಕ್ಷ ಸಾಕ್ಷಿ ಹನುಮಂತರಾಯಪ್ಪನವರನ್ನು ಠಾಣೆಗೆ ಬರಮಾಡಿಕೊಂಡು, ಅವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ. ಹನುಮಂತರಾಯಪ್ಪ ನಿಶಾನೆ ಪಿ5 ರಂತೆ ನನ್ನ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತಾರೆ. ಆ ಸಮಯದಲ್ಲಿ ಹೇಳಿಕೆ ಮಾಡಿಕೊಳ್ಳುವುದನ್ನು ವಿಡಿಯೋ ಚಿತ್ರೀಕರಣ ಮಾಡಿಕೊಂಡಿರುತ್ತೇನೆ. ಹೇಳಿಕೆ ನೀಡುವ ವಿಡಿಯೋ ಇರುವ ಸಿಡಿಯನ್ನು ಸಿಡಿ ಪ್ಲೇಯರ್ ನಲ್ಲಿ ಹಾಕಿ ಪ್ಲೇ ಮಾಡಿ ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಒಪ್ಪಿಕೊಂಡಿದ್ದರಿಂದ ಸಿಡಿಯನ್ನು ನಿಶಾನೆ ಪಿ11 ಎಂದು ಗುರುತಿಸಲಾಯಿತು.

5. ದಿ.29.06.2019 ರಂದು ತನಿಖೆ ಮುಂದುವರೆಸಿ, ಈ ಕೇಸಿನ ಫಿರ್ಯಾದಿ ಆರೋಪಿತರು ಉಪಯೋಗಿಸಿದ ವಸ್ತುಗಳಾದ ಒಂದು ಸಾರ್ವೆ ದೊಣ್ಣೆ, ಒಂದು ಕಬ್ಬಿಣದ ರಾಡ್, ಒಂದು ಮಚ್ಚು, ಒಂದು ಕುಡುಗೋಲು, ಒಂದು ಚಾಕು, ಒಂದು ತೆಂಗಿನ ಕಡ್ಡಿ ಪೊರಕೆ, ಒಂದು ಬಿಳಿ ಶರ್ಟ್, ಖಾರದ ಪುಡಿ ಇರುವ ಪ್ಲಾಸ್ಟಿಕ್ ಕವರನ್ನು ಹಾಜರುಪಡಿಸಿದ್ದು, ಅವುಗಳನ್ನು ಪಂಚರಾದ ಹನುಮಂತರಾಯಪ್ಪ ಮತ್ತು ನಾಗರಾಜುರವರ ಸಮಕ್ಷಮ ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಆ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ1 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ1(ಡಿ) ಎಂದು ಗುರುತಿಸಲಾಯಿತು. ನಂತರ ಅಮಾನತ್ತುಪಡಿಸಿಕೊಂಡ ಮುದ್ದೇಮಾಲುಗಳನ್ನು ಮಾಲುಪಟ್ಟಿಯಲ್ಲಿ ಅಳವಡಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆ ವಸ್ತುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಮು ಮಾ 1 ರಿಂದ 8 ಎಂದು ಈಗಾಗಲೇ ಗುರುತಿಸಲಾಗಿದೆ. ನಂತರ ಈ ಕೇಸಿನ ಮುಂದಿನ ತನಿಖೆಯನ್ನು ಚಾ ಸಾ 10 ಪಿಎಸ್ಐ ರಾಜು ಡಿ.ಎಲ್.ರವರಿಗೆ ವಹಿಸಿಕೊಟ್ಟಿರುತ್ತೇನೆ. ನಂತರ ಚಾ ಸಾ 10 ತನಿಖೆ ಮುಂದುವರೆಸಿಕೊಂಡು ವರ್ಗಾವಣೆಗೊಂಡಿದ್ದು, ದಿ.31.08.2019

ರಂದು ಪುನಃ ಕಡತವನ್ನು ಅವರಿಂದ ಸ್ವೀಕರಿಸಿ, ಎಫ್.ಎಸ್.ಎಲ್. ನಿಂದ ಸ್ವೀಕೃತಿಯನ್ನು ಸ್ವೀಕರಿಸಿರುತ್ತೇನೆ. ಆ ಎಫ್.ಎಸ್.ಎಲ್. ಸ್ವೀಕೃತಿಯನ್ನು ಸಾಕ್ಷಿ ತನ್ನ ಕಡತದಿಂದ ತೆಗೆದುಕೊಟ್ಟಿದ್ದು, ಅದನ್ನು ನಿಶಾನೆ ಪಿ12 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ12(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ.ಎಸ್.ಪುಟ್ಟರಾಜಣ್ಣ ವಕೀಲರಿಂದ ಆರೋಪಿತರ ಪರವಾಗಿಃ**

6. ಫಿರ್ಯಾದಿ ಕೊಟ್ಟ ದೂರನ್ನು ಸರಿಯಾಗಿ ಓದಿದ್ದೇನೆ. ಫಿರ್ಯಾದಿ ಶಿರಾ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದು, ತಡವಾಗಿ ದೂರು ಕೊಟ್ಟಿದ್ದೇನೆಂದು ದೂರಿನಲ್ಲಿ ನಮೂದಿಸಿರುತ್ತಾರೆ. ನಾನು ತಕ್ಷಣ ಆಸ್ಪತ್ರೆಗೆ ಹೋಗಿ ಗಾಯಾಳುವಿನ ವಿಚಾರಣೆ ಮಾಡಿಲ್ಲ. ಗಾಯಾಳುವೇ ಠಾಣೆಗೆ ಬಂದು ದೂರು ಕೊಟ್ಟಿರುತ್ತಾರೆ. ನಾನು ಠಾಣಾ ಪ್ರಭಾರದಲ್ಲಿದ್ದಾಗ ಫಿರ್ಯಾದಿ ಆಸ್ಪತ್ರೆಗೆ ದಾಖಲಾಗಿದ್ದ ಬಗ್ಗೆ ಆಸ್ಪತ್ರೆಯಿಂದ ಯಾವುದೇ ಮಾಹಿತಿ ಸಿಕ್ಕಿಲ್ಲ. ಆಸ್ಪತ್ರೆಗೆ ದಾಖಲಾದಾಗ ಆಸ್ಪತ್ರೆಯವರು ಎಂ.ಎಲ್.ಸಿ. ಮಾಡಿ ಠಾಣೆಗೆ ಮಾಹಿತಿ ಕೊಡುತ್ತಾರೆ. ನಾನು ಸ್ಥಳಕ್ಕೆ ಮಹಜರ್ ಮಾಡಲು ಹೋದಾಗ ಅಲ್ಲಿ ಘಟನೆಯ ಬಗ್ಗೆ ಯಾವುದೇ ಕುರುಹುಗಳು ಇರಲಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಕುರುಹುಗಳು ಇಲ್ಲದಿದ್ದರೂ ಕೂಡಾ ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹನುಮಂತರಾಯಪ್ಪ ಮತ್ತು ಭಾಗ್ಯಮ್ಮ ನನ್ನ ಮುಂದೆ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿ ಯಾವುದೇ ಮುದ್ದೇಮಾಲುಗಳನ್ನು ಠಾಣೆಗೆ ತಂದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸ್ಥಳ ಮಹಜರ್ ಮಾಡಿದ ಸ್ಥಳದಲ್ಲಿ ಸ್ಥಳೀಕರನ್ನು ಕರೆದಿಲ್ಲ ಎಂದರೆ ಸರಿಯಲ್ಲ. ಆ ಸ್ಥಳದ ಪಹಣಿಯನ್ನು ತೆಗೆದುಕೊಂಡಿಲ್ಲ. ನಾನು ಮಹಜರಗಳನ್ನು ಠಾಣೆಯಲ್ಲೇ ತಯಾರಿಸಿ, ಫಿರ್ಯಾದಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು